ದಿನಾಂಕ 20-11-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ : ಸ.ಸ.ಅ. ಅವರಿಂದ

ನಿ.ಪಿ. 2 ಅಂಚೆ ಯಾದಿ ಪುಸ್ತಕ ಅದರಲ್ಲಿ ಕ್ರ.ಸಂ. 4783/43 ದಿ: 19/03/2010, 400.00 ಹುಚ್ಚಯ್ಯ ಸ್ವಾಮೀ ವೀರಭದ್ರಯ್ಯಸ್ವಾಮಿರವರಿಗೆ ಮುಟ್ಟಿದೆ ಅಂತಾ ಇರುವ ಹಣವನ್ನು ಆರೋಪಿ ದುರುಪಯೋಗಪಡಿಸಿಕೊಂಡಿರುತ್ತಾನೆ, ಸದರಿ ಭಾಗವನ್ನು ನಿ.ಪಿ. 2(ಎ) ಎಂದು ಗುರುತಿಸಲಾಯಿತು.

ಅದಂತೆ ಕ್ರ.ಸ. 4751/4 ದಿ: 12/03/2010 ಸಫನ್‌ಸಾಬ್, ಖಾಸಿಂಸಾಬ್ ಅಂತಾ ಇರುವ ಮೊತ್ತವನ್ನು ಆರೋಪಿ ದುರುಪಯೋಗಪಡಿಸಿಕೊಂಡಿರುತ್ತಾರೆ. ಸದರಿ ಭಾಗವನ್ನು ನಿ.ಪಿ. 2(ಬಿ) ಎಂದು ಗುರುತಿಸಲಾಯಿತು.

ಸದರಿ ಅಂಚೆಯಾಳಿನ ಪುಸ್ತಕ ಆರೋಪಿಯ ಹತ್ತಿರ ಇತ್ತು. ಅದನ್ನು ಆತನೇ ನಿರ್ವಹಿಸುತ್ತಿದ್ದನು. ಇನ್ನು ಒಂದು ಪುಸ್ತಕ ಇತ್ತು ಸದರಿ ಪುಸ್ತಕವನ್ನು ಆರೋಪಿ ಕಳೆದುಹೋಗಿರುತ್ತದೆ ಅಂತಾ ಹೇಳಿರುತ್ತಾನೆ. ತನಿಖಾಧಿಕಾರಿಗಳಿಗೆ ಕೊಟ್ಟಿಲ್ಲ.

ಪಾಟೀ ಸವಾಲು : ಶ್ರೀ. ವಕೀಲರಿಂದ

ಆರೋಪಿ ಪರ ವಕೀಲರನ್ನು ಕೂಗಿಸಲಾಗಿ ಗೈರು ಹಾಜರಿದ್ದು, ಆರೋಪಿಗೆ ಪಾಟೀ ಸವಾಲು ಮಾಡಲು ಕೇಳಿದಾಗ ಪಾಟೀ ಸವಾಲು ಮಾಡಲು ಒಪ್ಪಿಕೊಂಡಿರುತ್ತಾರೆ.

ಪಾಟೀ ಸವಾಲು : ಆರೋಪಿ ಕಡೆಯಿಂದ

ಪೋಸ್ಟ್‌ಮನ್ ಪುಸ್ತಕ ಪೋಸ್ಟ್‌ಮನ್‌ಗಳ ಹತ್ತಿರ ಪ್ರತಿದಿನ ಅವರ ಕೆಲಸದ ಸಮಯ ಮುಗಿಯುವರೆಗೆ ಇರುತ್ತದೆ, ನಂತರ ಅದನ್ನು ಟ್ರಜರಿ ಇಲಾಖೆ (ಪತ್ರಾಂಕಿತ ಇಲಾಖೆ) ಗೆ

ಹಾಜರುಪಡಿಸಬೇಕಾಗುತ್ತದೆ. ಅದನ್ನು ಪೋಸ್ಟ್‌ಮನ್‌ಗಳೇ ಸದರಿ ಇಲಾಖೆಗೆ ಹಾಜರುಪಡಿಸುತ್ತಾರೆ. ಪ್ರತಿದಿನ ಬೆಳಗ್ಗೆ ಪೋಸ್ಟ್‌ಮೆನ್ ಇವರ ಕರ್ತವ್ಯ ಶುರುವಾದಾಗ ಟ್ರಜರಿ ಇಲಾಖೆಯವರೆ ಅದನ್ನು ಸಂಬಂಧಪಟ್ಟ ಪೋಸ್ಟ್‌ಮನ್ ಇವರಿಗೆ ಆ ದಿನದ ಕರ್ತವ್ಯಕ್ಕೆ ನೀಡುತ್ತಾರೆ. ಅವರ ಕಾರ್ಯ ಮುಗಿದ ತಕ್ಷಣ ಅವರು ಟ್ರಜರಿಗೆ ವಾಪಾಸ್ ಕೊಡಬೇಕು.

ಪ್ರಶ್ನೆ: ನಾನು ಅಪರಾಧ ಮಾಡಿದ್ದೇನೆ ಅಂತಾ ಹೇಗೆ ಹೇಳುತ್ತೀರಿ?

ಉತ್ತರ: ನಾನು ನಮ್ಮ ಮೇಲಾಧಿಕಾರಿಗಳ ಆದೇಶದಂತೆ ದಾಖಲೆಗಳ ಆಧಾರದ ಮೇಲೆ ದೂರು ನೀಡಿದ್ದೇನೆ.

ಆರೋಪಿ ಮುಂದೆ ಯಾವುದೇ ಪ್ರಶ್ನೆಗಳು ಇಲ್ಲ ಅಂತಾ ತಿಳಿಸಿದ್ದು ಮತ್ತು ತಮ್ಮ ವಕೀಲರು ಪಾಟೀ ಸವಾಲು ಮಾಡುತ್ತಾರೆ ಅಂತಾ ತಿಳಿಸಿದ್ದು, ವಕೀಲರು ಗೈರು ಹಾಜರಿದ್ದರಿಂದ ಮುಂದುವರೆದ ಪಾಟೀ ಸವಾಲು ಇಲ್ಲ ಅಂತಾ ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ. ಹೇ. ಕೇ. ಸರಿ ಇದೆ,

ಪ್ರಧಾನ ಸಿವಿಲ್ ನ್ಯಾಯಾಧೀಶರು, ಸಿಂಧನೂರು.

ಕರ್ನಾಟಕ ಸರ್ಕಾರ  ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ 57)

ನಮೂನೆ ಸಂಖ್ಯೆ 4

ಪ್ರಧಾನ ಜೆ.ಎಂ.ಎಫ್.ಸಿ. ನ್ಯಾಯಾಲಯ, ಸಿಂಧನೂರು.

ಸಿ.ಸಿ. ಸಂಖ್ಯೆಃ 40/2017 CW-4 PW- 2

| | |
|---|---|
| ಹೆಸರು | ರಾಜಾಸಾಬ್ |
| ತಂದೆಯ ಹೆಸರು | ಸುಬಾನ್‌ಸಾಬ್ |
| ವಯಸ್ಸು | 27 |
| ಉದ್ಯೋಗ | ಆಟೋ ಚಾಲಕ |
| ವಾಸ ಸ್ಥಳ | ಎ.ಕೆ. ಗೋಪಾಲನಗರ. |

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕಃ 20-11-2021

ಮುಖ್ಯ ವಿಚಾರಣೆಃ ಸ ಸ ಅ ಅವರಿಂದ

ನನ್ನ ತಂದೆ ದಿ: 14/02/2010 ರಂದು ಮೃತಪಟ್ಟಿರುತ್ತಾರೆ. ಅವರು ಜೀವಂತ ಇದ್ದಾಗ ಸರ್ಕಾರದಿಂದ ಪ್ರತಿ ತಿಂಗಳು 400.00 ವೃದ್ಧಾಪ್ಯ ವೇತನ ಬರುತ್ತಿತ್ತು. ಅದನ್ನು ಮನಿಆರ್ಡರ್ ಮೂಲಕ ಪೋಸ್ಟ್‌ಮನ್ ತಂದು ಕೊಡುತ್ತಿದ್ದ. ಅವರು ತೀರಿಕೊಂಡ ನಂತರ ನಮ್ಮ ಮನೆಗೆ ವೃದ್ಧಾಪ್ಯ ವೇತನ ಬರುವುದು ನಿಂತಿರುತ್ತದೆ ಆದರೆ ನಮ್ಮ ತಂದೆಯ ಹೆಸರಿನಲ್ಲಿ ಸದರಿ ವೃದ್ಧಾಪ್ಯ ವೇತನವನ್ನು ಪೋಸ್ಟ್‌ಮನ್ ಅಮರೇಶ ನಾಯಕ ತೆಗೆದುಕೊಳ್ಳುತ್ತಿದ್ದ ಅಂತಾ ಪೋಸ್ಟ್ ಕಛೇರಿಯ ಅಧಿಕಾರಿಗಳಿಂದ ತಿಳಿಯಿತು.

ಈಗ ನಾನು ನೋಡುತ್ತಿರುವ ನಿ.ಪಿ. 3 ನನ್ನ ತಂದೆಗೆ ಬರುತ್ತಿದ್ದ ಮನಿಆರ್ಡರ್ ಆಗಿರುತ್ತದೆ. ಅದರ ಮೇಲೆ ಆರೋಪಿ ನನ್ನ ತಂದೆಯಂತೆ ಹೆಬ್ಬೆಟ್ಟು ಸಹಿ ಮಾಡಿ ಹಣ ಪಡೆದುಕೊಂಡಿರುತ್ತಾನೆ. ಸದರಿ ದಿ: 12/03/2010 ರಂದು ನನ್ನ ತಂದೆ ಜೀವಂತ ಇರಲಿಲ್ಲ.

ನಾನು ನನ್ನ ತಂದೆಯ ಮರಣ ಪ್ರಮಾಣ ಪತ್ರ ನೋಡಿದರೆ ಗುರುತಿಸುತ್ತೇನೆ. ಈಗ ನಾನು ನೋಡುತ್ತಿರುವ ನಿ.ಪಿ. 11 ನನ್ನ ತಂದೆಯ ಮರಣ ಪ್ರಮಾಣ ಪತ್ರ ಆಗಿರುತ್ತದೆ.

ಈ ವಿಷಯವನ್ನು ನಮಗೆ ತಿಳಿಸಿ ಅಧಿಕಾರಿಗಳು ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಈಗ ನಾನು ನೋಡುತ್ತಿರುವ ಹೇಳಿಕೆ ನಾನೇ ನೀಡಿರುವ ಹೇಳಿಕೆಯಾಗಿರುತ್ತದೆ. ಅದರ ಮೇಲೆ

ನಾನು ಸಹಿ ಮಾಡಿರುತ್ತೇನೆ. ಅದನ್ನು ನಿ.ಪಿ. 22 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 22(ಎ) ಎಂದು ಗುರುತಿಸಲಾಯಿತು.

ಈ ಕುರಿತು ಪೋಲೀಸರು ವಿಚಾರಣೆ ಮಾಡಿರುತ್ತಾರೆ ಹೇಳಿಕೆ ನೀಡಿರುತ್ತೇನೆ.

ಪಾಟೀ ಸವಾಲು : ಆರೋಪಿ ಪರ ಶ್ರೀ. ಜಿ.ಎಸ್. ವಕೀಲರು ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದು, ಸಮಂಜಸ ಕಾರಣಗಳು ಇರದೇ ಇರುವುದರಿಂದ ಪಾಟೀ ಸವಾಲು ಇಲ್ಲ ಅಂತಾ ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ.)

**ಓ ಹೇ ಕೇ ಸರಿ ಇದೆ,**

ಪ್ರಧಾನ ಸಿವಿಲ್ ನ್ಯಾಯಾಧೀಶರು. ಸಿಂಧನೂರು.